# 2 ನೇ ಅಧಿಕ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ತುಮಕೂರು

**S.C.No.1/2021**

CW. 38 PW.14

ದಿನಾಂಕಃ 16.03.2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

| | |
|---|---|
| ಹೆಸರುಃ | ಸಿದ್ದರಾಜು |
| ತಂದೆಯ ಹೆಸರುಃ | ಲೇಟ್ ದೊಡ್ಡಯ್ಯ |
| ವಯಸ್ಸುಃ | 61 ವರ್ಷ |
| ವೃತ್ತಿಃ | ನಿವೃತ್ತ ಪಿ ಎಸ್ ಐ |
| ವಾಸಸ್ಥಳಃ | ತುಮಕೂರು |

**ಮುಖ್ಯ ವಿಚಾರಣೆಃ ಸರ್ಕಾರಿ ಅಭಿಯೋಜಕರಿಂದ**

ನಾನು 2019 ರಿಂದ 2023 ರವರಿಗೆ ಕುಣಿಗಲ್ ಪೊಲೀಸ್ ಠಾಣೆಯಲ್ಲಿ ಎ ಎಸ್ ಐ ಆಗಿ ಕರ್ತವ್ಯ ನಿರ್ವಹಿಸಿದ್ದೇನೆ .

2) ದಿ 01-07-20 ರಂದು ಬೆಳಗ್ಗೆ 10.50 ರ ಸುಮಾರಿಗೆ ನಾನು ಠಾಣೆಯಲ್ಲಿ ಎಂದಿನಂತೆ ಕರ್ತವ್ಯ ನಿರ್ವಹಿಸುತ್ತಿದ್ದಾಗ , ಕುಣಿಗಲ್ ಸರ್ಕಾರಿ ಆಸ್ಪತ್ರೆಯಿಂದ ಬಂದ ದೂರವಾಣಿ ಮಾಹಿತಿಯ ಮೇರೆಗೆ ನಾನು ಸುಮಾರು 12 ಗಂಟೆಗೆ ಕುಣಿಗಲ್ ಸರ್ಕಾರಿ ಆಸ್ಪತ್ರೆಗೆ ಭೇಟಿ ನೀಡಿದ್ದೇನೆ. ವೈದ್ಯಾಧಿಕಾರಿಗಳು ಆಸ್ಪತ್ರೆಯಲ್ಲಿ ಪಾಂಡುರಂಗ ಎಂಬುವರು ಹಲ್ಲೆಗೆ ಒಳಗಾದ ಹಿನ್ನೆಲೆಯಲ್ಲಿ ಚಿಕಿತ್ಸೆಗೆ ದಾಖಲಾದ ಬಗ್ಗೆ ಮಾಹಿತಿ ನೀಡಿರುತ್ತಾರೆ. ಸದರಿ ಮಾಹಿತಿಯಂತೆ ನಾನು ಗಾಯಳು ಪಾಂಡುರಂಗರವರ

ಹೇಳಿಕೆಯನ್ನು ವೈದ್ಯಾಧೀಕಾರಿಗಳ ಸಮಕ್ಷಮದಲ್ಲಿ ಬೆಳಗ್ಗೆ 12 ಗಂಟೆಯಿಂದ 12.45 ರವರಿಗೆ ಬರೆದುಕೊಂಡಿರುತ್ತೇನೆ. ಸಾಕ್ಷಿ ತಾವು ಬರೆದುಕೊಂಡ ಹೇಳಿಕೆ ಹಾಗೂ ಅದರ ಮೇಲೆ ಇರುವ ತಮ್ಮ ಸಹಿಯನ್ನು ನೋಡಿ ಗುರುತಿಸಿದ್ದು , ಹೇಳಿಕೆಯನ್ನು ಈಗಾಗಲೇ ನಿಪಿ-1 ಎಂದು ದಾಖಲಿಸಿ ಗುರುತಿಸಲಾಗಿದ್ದು, ಸಾಕ್ಷಿಯ ಸಹಿಯನ್ನು ನಿಪಿ-1(ಬಿ) ಎಂದು ಗುರುತಿಸಲಾಯಿತು. ಹೇಳಿಕೆಯನ್ನು ದಾಖಲಿಸಿದ ನಂತರ ಠಾಣೆಗೆ ಹಿಂದಿರುಗಿ ಮೊ.ನಂ.161/20 ರಂದು ಮಧ್ಯಾಹ್ನ 1.10 ರ ಸುಮಾರಿಗೆ ಭಾರತೀಯ ದಂಡ ಪ್ರಕ್ರಿಯಾ ಸಂಹಿತೆ 307 ರೆಡ್ ವಿತ್ 34 ರೀತ್ಯಾ ಪ್ರಕರಣ ದಾಖಲಿಸಿ ಪ್ರ ವ ವ ಯನ್ನು ಅದೇ ದಿನ ಘನನ್ಯಾಯಾಲಯಕ್ಕೂ ಹಾಗೂ ಇಲಾಖಾ ಮೇಲಾಧಿಕಾರಿಗಳಿಗೂ ನಿವೇದಿಸಿಕೊಂಡಿದ್ದೇನೆ. ಸಾಕ್ಷಿ ತಾವು ನೋಂದಾಯಿಸಿರುವ ಪ್ರ ವ ವ ಹಾಗೂ ಅದರಲ್ಲಿ ಇರುವ ತಮ್ಮ ಸಹಿ ನೋಡಿ ಗುರುತಿಸಿದ್ದು, ಪ್ರ ವ ವ ಯನ್ನು ನಿಪಿ-33 ಎಂದು ಸಾಕ್ಷಿಯ ಸಹಿಯನ್ನು ನಿಪಿ-33(ಎ) ಎಂದು ಗುರುತಿಸಲಾಯಿತು.

3) ಅದೇ ದಿನ ಮಧ್ಯಾಹ್ನ 2.15 ರಿಂದ 3.15 ರವರಿಗೆ ಕೃತ್ಯನಡೆದ ಸ್ಥಳವಾದ ಬಿ ಎಂ ರಸ್ತೆಯಲ್ಲಿ ಇರುವ ಧನುಶ್ರೀ ಫೋಟೋ ಸ್ಟುಡಿಯೋದ ಬಳಿ ಹೋಗಿ ಪಂಚರ ಸಮಕ್ಷಮ ಪಂಚನಾಮೆಯನ್ನು ಜರೂಗಿಸಿರುತ್ತೇನೆ. ಪಂಚನಾಮೆಯ ವೇಳೆ ಕೃತ್ಯ ನಡೆದ ಸ್ಥಳದಲ್ಲಿ ಪಾಂಡುರಂಗರವರಿಗೆ ಹಲ್ಲೆ ಮಾಡಿದಾಗ ಅಲ್ಲಲ್ಲಿ ರಕ್ತ ಚಿಮ್ಮಿದ್ದು, ಹತ್ತಿಯ ಸಹಾಯದಿಂದ ಸದರಿ ರಕ್ತವನ್ನು ಸಂಗ್ರಹಿಸಿ ಬಿಳಿ ಡಬ್ಬಿಯಲ್ಲಿ ಹಾಕಿ ಸದರಿ ಡಬ್ಬಿಯನ್ನು ಬಿಳಿ ಬಟ್ಟೆಯ ಚೀಲದಲ್ಲಿ ಹಾಕಿ ಕೆ ಎಂಬ ಇಂಗ್ಲೀಷ್ ಅಕ್ಷರದಿಂದ ಸೀಲ್ ಹಾಕಿ ಪಂಚರ ಸಮಕ್ಷಮ ಅಮಾನತ್ತುಪಡಿಸಿಕೊಂಡಿರುತ್ತೇನೆ. ನಂತರ ಸ್ಥಳದಲ್ಲಿ ಬಿದಿದ್ದ ಖಾರದ ಪುಡಿಯನ್ನು ಸಹ ಪಂಚರ ಸಮಕ್ಷಮ ಸಂಗ್ರಹಿಸಿ ಕೆ ಎಂಬ ಇಂಗ್ಲೀಷ್

ಅಕ್ಷರದಿಂದ ಸೀಲ್ ಮಾಡಿರುತ್ತೇನೆ. ಸ್ಥಳದಲ್ಲಿ ಚೆಲ್ಲಾಪಿಲ್ಲಿಯಾಗಿ ಬಿದ್ದಿದ್ದ ಹಲವಾರು ಭಾವಚಿತ್ರಗಳನ್ನು ಸಹ ನಾನು ಪಂಚನಾಮೆಯ ವೇಳೆ ಅಮಾನತ್ತುಪಡಿಸಿಕೊಂಡಿರುತ್ತೇನೆ ಸ್ಥಳದಲ್ಲಿ ಮಧ್ಯಾಹ್ನ 2.15 ರಿಂದ 3.15 ರವರಿಗೆ ಪಂಚನಾಮೆ ಜರೂಗಿಸಿ ಪಂಚರ ಸಹಿಗಳನ್ನು ತೆಗೆದುಕೊಂಡಿರುತ್ತೇನೆ. ಸಾಕ್ಷಿ ಸ್ಥಳದಲ್ಲಿ ಜರೂಗಿಸಿದ ಪಂಚನಾಮೆ ಹಾಗೂ ಅದರ ಮೇಲೆ ಇರುವ ತಮ್ಮ ಸಹಿ ನೋಡಿ ಗುರುತಿಸಿರುತ್ತಾರೆ. ಪಂಚನಾಮೆ ಈಗಾಗಲೇ ನಿ.ಪಿ.8 ಎಂದು ಗುರುತಾಗಿದ್ದು ಸಾಕ್ಷಿಯ ಸಹಿಯನ್ನು ನಿಪಿ-8(ಸಿ) ಎಂದು ಗುರುತಿಸಲಾಯಿತು. ಸಾಕ್ಷಿ ನ್ಯಾಯಾಲಯದ ಮುಂದೆ ಹಾಜರುಪಡಿಸಿರುವ ಖಾರದ ಪುಡಿ, ರಕ್ತ ಸಂಗ್ರಹಿಸಿರುವ ಹತ್ತಿ , 14 ಛಾಯಚಿತ್ರಗಳನ್ನು ನೋಡಿ ಗುರುತಿಸಿದ್ದು ಇವುಗಳನ್ನು ಕ್ರಮವಾಗಿ ಮು ಮಾ-1 ರಿಂದ 3 ಎಂದು ಗುರುತಿಸಲಾಯಿತು. ಮು ಮಾ-1 ರಿಂದ 3 ರ ಮೇಲೆ ಅಂಟಿಸಿರುವ ಮಹಜರ್ ಚೀಟಿಯ ಮೇಲೆ ಇರುವ ಸಾಕ್ಷಿಯ ಸಹಿಯನ್ನು , ಸಾಕ್ಷಿ ನೋಡಿ ಗುರುತಿಸಿದ್ದು, ಇದನ್ನು ಕ್ರಮವಾಗಿ ಮು ಮಾ-1(ಎ) ರಿಂದ ಮು ಮಾ-3(ಎ) ಎಂದು ಗುರುತಿಸಲಾಯಿತು. ಅದೇ ದಿನ ಠಾಣೆಗೆ ಹಿಂದಿರುಗಿ ಅಮಾನತ್ತುಪಡಿಸಿಕೊಂಡ ವಸ್ತುಗಳನ್ನು ಠಾಣಾ ಮಾಲುಪಟ್ಟಿ ಸಂಖ್ಯೆ 98/2020 ರಲ್ಲಿ ಆಳವಡಿಸಿ ಅದೇ ದಿನ ಘನ ನ್ಯಾಯಾಲಯಕ್ಕೆ ನಿವೇದಿಸಿಕೊಂಡಿರುತ್ತೇನೆ. ಸಾಕ್ಷಿ ಮಾಲುಪಟ್ಟಿ ಹಾಗೂ ಅದರ ಮೇಲೆ ಇರುವ ತಮ್ಮ ಸಹಿ ನೋಡಿ ಗುರುತಿಸಿದ್ದು, ಮಾಲುಪಟ್ಟಿಯನ್ನು ನಿಪಿ-34 ಹಾಗೂ ಸಾಕ್ಷಿಯ ಸಹಿಯನ್ನು ನಿಪಿ-34(ಎ) ಎಂದು ಗುರುತಿಸಲಾಯಿತು. ಈ ಪ್ರಕರಣದಲ್ಲಿ ಆಳವಡಿಸಿದ ಕಲಂಗಳು ಘೋರಸ್ವರೂಪದ್ದು ಆಗಿದ್ದರಿಂದ ಪ್ರಕರಣದ ಮುಂದಿನ ತನಿಖೆಗಾಗಿ ಅದೇದಿನ ಚಾಸಾ-40 ರವರಿಗೆ ನಿವೇದಿಸಿಕೊಂಡಿದ್ದೇನೆ .

**ಪಾಟೀ ಸವಾಲುಃ ಆರೋಪಿ ಪರ ಶ್ರೀ. ಜಿ.ಪಿ.ಆರ್. ವಕೀಲರಿಂದ ಃ-**

ಯಾವ ವೈದ್ಯಾದಿಕಾರಿ ನಮಗೆ ಆಸ್ಪತ್ರೆಯಿಂದ ಮಾಹಿತಿ ಕೊಟ್ಟಿದ್ದಾರೆ ಎಂದು ನನಗೆ ಈಗ ನೆನಪಿಲ್ಲ. ಆಸ್ಪತ್ರೆಗೆ ಮಧ್ಯಾಹ್ನ 12.00 ಗಂಟೆಗೆ ಹೋಗಿರುತ್ತೇನೆ. ಘಟನಾ ಸ್ಥಳಕ್ಕೆ 12.15 ಗಂಟೆಗೆ ಹೋಗಿರುತ್ತೇನೆ. ಪಂಚರಿಗೆ ನಾವು ನೋಟೀಸ್ ನ್ನು ಕೊಟ್ಟಿದ್ದೇನೆ. ಸದರಿ ನೋಟೀಸ್‌ನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿದ್ದೇನೆ. ಯಾವುದೇ ನೋಟೀಸ್ ನಾನು ಜಾರಿ ಮಾಡಿಲ್ಲ ಎಂದರೆ ಸರಿಯಲ್ಲ. ಮುದ್ದೆ ಮಾಲುಗಳನ್ನು ಈ ಕೇಸಿಗೋಸ್ಕರ ಸೃಷ್ಟಿಸಿದ್ದೇನೆ ಎಂದರೆ ಸರಿಯಲ್ಲ. ಆರೋಪಿತರ ವಿರುದ್ಧ ಸುಳ್ಳು ಎಫ್.ಐ.ಆರ್ ದಾಖಲಿಸಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸರಿ ಇದೆ

2 ನೇಅಧಿಕ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ತುಮಕೂರು.